ಶ್ರೀರಂಗಪಟ್ಟಣ ತಾಲ್ಲೂಕು ಕೆ.ಆರ್.ಎಸ್.ನಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೇರಿಸುವುದು.

171 (800) ಶ್ರೀಮತಿ ವಿಜಯಲಕ್ಷ್ಮಮ್ಮ ಬಂಡಿಸಿದ್ದೇಗೌಡ (ಶ್ರೀರಂಗಪಟ್ಟಣ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶ್ರೀರಂಗಪಟ್ಟಣ ತಾಲ್ಲೂಕು ಕೆ.ಆರ್.ಎಸ್.ನಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ನೀರಾವರಿ ಇಲಾಖೆಯ ವತಿಯಿಂದ ಆರೋಗ್ಯ ಇಲಾಖೆಗೆ ಹಸ್ತಾಂತರಿಸುವ ಪ್ರಸ್ತಾವನೆ ಸರ್ಕಾರಕ್ಕೆ ಬಂದಿದೆಯೇ?

ಆ) ಕೆ.ಆರ್.ಎಸ್.ನ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೇರಿಸುವ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಹೌದು.

ಆ) ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಇರುವುದಿಲ್ಲ.

ಶ್ರೀಮತಿ ವಿಜಯಲಕ್ಷ್ಮಮ್ಮ ಬಂಡಿಸಿದ್ದೇಗೌಡ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಕೊಟ್ಟಿದ್ದಾರೆ ಆದರೆ, ಕೆ.ಆರ್. ಸಾಗರದಲ್ಲಿರುವ ನೀರಾವರಿ ಇಲಾಖೆಯ ಆಸ್ಪತ್ರೆಯನ್ನು ಆರೋಗ್ಯ ಇಲಾಖೆಯವರು ವಹಿಸಿಕೊಳ್ಳುವುದೆಂದು 1996ನೇ ಇಸವಿಯಿಂದ ನಾವು ಈ ಪ್ರಶ್ನೆಯನ್ನು ಕೇಳುತ್ತಿದ್ದೇವೆ, ಇದರ ಬಗ್ಗೆ ಯಾರೂ ಗಮನವನ್ನೇ ಹರಿಸುತ್ತಿಲ್ಲ. ಈಗಾಗಲೇ ಕೆಆರ್ಎಸ್‌ನಲ್ಲಿ ಪ್ರತಿದಿವಸವೂ ಕೂಡ ಅಲ್ಲಿ ಸಾವಿರಾರು ಜನಪ್ರವಾಸಿಗರು ಬರುತ್ತಾರೆ. ಆಕ್ಸಿಡೆಂಟ್ ಆಗುತ್ತದೆ, ಒಂದು ಕಾಟನ್ ಇಲ್ಲ, ಯಾವುದೇ ಉಪಯೋಗಕರವಾದ ಒಂದು ವಸ್ತುವಿಲ್ಲ, ಅದು ನೀರಾವರಿ ಇಲಾಖೆಗೆ ಸೇರಿದೆಯಾ ಅಥವಾ ಆರೋಗ್ಯ ಇಲಾಖೆಗೆ ಸೇರಿದೆಯಾ ಅಥವಾ ಮಹಿಳಾ ಶಾಸಕರಿಗೆ ಏನು ಮಾಡಿಕೊಡಬಾರದೆಂಬ ಸರ್ಕಾರದ ನೀತಿಯನ್ನು ಅನುಸರಿಸುತ್ತಿದ್ದಾರೋ? ಏಕೆಂದರೆ ಹಣಕಾಸು ಇಲಾಖೆಗೆ ಹೋಗುವುದು ವಾಪಸ್ ಬರುವುದು, 1996ನೇ ಇಸವಿಯಿಂದ ಹೀಗೆಯೇ ನಡೆಯುತ್ತಿದೆ, ಇದನ್ನು ಯಾವಾಗ ಮಾಡುತ್ತೀರಿ? ಈ ಬಗ್ಗೆ ಹೆಚ್ಚು ಗಮನಹರಿಸಿ ಈ ವರ್ಷವೇ ಅದು ಆಗುತ್ತದೆಯೋ ಇಲ್ಲವೋ ಎಂಬುದನ್ನು ಕೇಳುತ್ತಿದ್ದೇನೆ.

ಶ್ರೀ ಆರ್. ಅಶೋಕ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ಹೇಳುವುದಾದರೆ ಇದು ನಮ್ಮ ಆಸ್ಪತ್ರೆಯಲ್ಲ, ನೀರಾವರಿ ಇಲಾಖೆಗೆ ಸೇರಿದ ಆಸ್ಪತ್ರೆ. ಅದನ್ನು ಆರೋಗ್ಯ ಇಲಾಖೆಗೆ ತೆಗೆದುಕೊಳ್ಳಿ ಎಂದು ಮಾನ್ಯ ಗೌರವಾನ್ವಿತ ಸದಸ್ಯರೇನು ಹೇಳುತ್ತಿದ್ದಾರೆ. ಆ ಬಗ್ಗೆ ಪ್ರಸ್ತಾವನೆಯನ್ನು ಈಗಾಗಲೇ ಕಳುಹಿಸಿದ್ದೇನೆ, ಆದಷ್ಟು ಶೀಘ್ರವಾಗಿ ಈ ಒಂದು ಆಸ್ಪತ್ರೆಯನ್ನು ಆರೋಗ್ಯ ಇಲಾಖೆಗೆ ವಹಿಸಿಕೊಳ್ಳಲು ಸರ್ಕಾರ ಬದ್ಧವಾಗಿದೆ, ಆ ಕೆಲಸವನ್ನು ನಾವು ಮಾಡುತ್ತೇವೆ, ಇನ್ನೊಂದು ಪ್ರಶ್ನೆ, ಅಪ್‌ಗ್ರೇಡ್ ಬಗ್ಗೆ ಕೇಳಿದ್ದಾರೆ, ಅದು ಈಗ ಸಾಧ್ಯವಾಗುವುದಿಲ್ಲ. ನೀರಾವರಿ ಇಲಾಖೆಯಿಂದ ಆರೋಗ್ಯ ಇಲಾಖೆಗೆ ವಹಿಸಿಕೊಂಡು ಔಷಧಿ ಇರಬಹುದು, ಉಳಿದಂತಹ ಸಿಬ್ಬಂದಿಯ ಕೊರತೆ ಇರಬಹುದು ಅವನ್ನು ತುಂಬಲು ಸರ್ಕಾರ ಈಗಾಗಲೇ ಕ್ರಮವನ್ನು ಕೈಗೊಂಡಿದೆ, ಆದಷ್ಟು ಶೀಘ್ರವಾಗಿ ಆ ಕೆಲಸವನ್ನು ಮಾಡುತ್ತೇನೆ.

ಶ್ರೀ ವಿಜಯಲಕ್ಷ್ಮಮ್ಮ ಬಂಡಿಸಿದ್ದೇಗೌಡ : ಅಧ್ಯಕ್ಷರ ಮೂಲಕ ನಾನು ಕೇಳುತ್ತಿದ್ದೇನೆ, ಇದು 1996ನೇ ಇಸವಿಯಿಂದ ನಡೆಯುತ್ತಿದೆ, ತಾವು ಈ ವರ್ಷವೇ ಇದನ್ನು ಮಾಡುತ್ತೀರೆನ್ನುವ ಭರವಸೆಯನ್ನು ಇಟ್ಟುಕೊಂಡು, ದಯವಿಟ್ಟು ಇದನ್ನು ಆರೋಗ್ಯ ಇಲಾಖೆಗೆ ವಹಿಸಿಕೊಡಬೇಕು.

ಈಗಾಗಲೇ ವೈರಲ್ ಫೀವರ್ ಇರುವುದರಿಂದ, ಆದಷ್ಟು ಹೆಚ್ಚು ಜಾಗ್ರತೆ ವಹಿಸಬೇಕು, ಅಲ್ಲಿ ಮಂಚ ಕೂಡ ಇಲ್ಲ, 10–15 ಸಾವಿರ ಜನಸಂಖ್ಯೆ ಇದೆ, ಪಂಚಾಯಿತಿ ಇದೆ, ಅಲ್ಲಿ ಸಾಕಷ್ಟು ಜನ ಪ್ರವಾಸಿಗರು ಬರುತ್ತಿರುತ್ತಾರೆ, ಆದುದರಿಂದ ಆ ಬಗ್ಗೆ ಹೆಚ್ಚು ಮುತುವರ್ಜಿಯನ್ನು ವಹಿಸಿ ಈ ಕೆಲಸವನ್ನು ಪ್ರಾರಂಭ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ಅಶೋಕ್ : ಅಧ್ಯಕ್ಷರು, ಇದೊಂದು ನೀರಾವರಿ ಇಲಾಖೆಗೆ ಸೇರಿದ ಆಸ್ಪತ್ರೆಯಾಗಿರುವುದರಿಂದ ಇದುವರೆವಿಗೂ ನಾವು ಏನೂ ಕ್ರಮ ತೆಗೆದುಕೊಳ್ಳಲು ಸಾಧ್ಯವಾಗಿಲ್ಲ, ನಾನು ಈಗಾಗಲೇ ಹೇಳಿರುವಂತೆ, ಮಾನ್ಯ ಸದಸ್ಯರ ಕೋರಿಕೆಯ ಮೇರೆಗೆ ನಾನು ಈಗಾಗಲೇ ಪ್ರಸ್ತಾವನೆಯನ್ನು ಕಳುಹಿಸಿದ್ದೇನೆ, ಆದಷ್ಟು ಶೀಘ್ರವಾಗಿ ಈ ಆಸ್ಪತೆಯನ್ನು ಆರೋಗ್ಯ ಇಲಾಖೆಗೆ ಸೇರಿಸುತ್ತೇವೆಂಬುದನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ರಾಜ್ಯದಲ್ಲಿ ಹೊಸ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ ಮಂಜೂರು ಮಾಡುವ ಬಗ್ಗೆ.

172 (890) ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನಬಾಗೇವಾಡಿ): ಮಾನ್ಯ ಪಶುಸಂಗೋಪನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಹೊಸ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳನ್ನು ಯಾವಾಗ ಪ್ರಾರಂಭಿಸಲಾಗುವುದು;

ಆ) ಹೊಸ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳನ್ನು ಮಂಜೂರು ಮಾಡುವಂತೆ ಕೋರಿ ಸರ್ಕಾರದ ಮುಂದಿರುವ ಪ್ರಸ್ತಾವನೆಗಳು ಯಾವುವು; (ಪಟ್ಟಿ ನೀಡುವುದು)

ಇ) ಯಾವ ನಿರ್ದಿಷ್ಟವಾದ ಕಾಲಮಿತಿ ಹಾಕಿಕೊಂಡು ಹೊಸ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳನ್ನು ಪ್ರಾರಂಭ ಮಾಡಲಾಗುವುದು?

ಶ್ರೀ ರೇವುನಾಯಕ್ ಬೆಳಮಗಿ (ಪಶುಸಂಗೋಪನೆ ಸಚಿವರು) :

ಅ) ಆ) ಮತ್ತು ಇ) ರಾಷ್ಟ್ರೀಯ ಕೃಷಿ ಆಯೋಗದ ಶಿಫಾರಸ್ಸಿನಂತೆ ಪ್ರತಿ 5000 ಜಾನುವಾರು ಘಟಕಗಳಿಗೊಂದರಂತೆ ಪಶುವೈದ್ಯರನ್ನೊಳಗೊಂಡ ಸಂಸ್ಥೆ ಇರಬೇಕೆಂದು ಶಿಫಾರಸ್ಸು ಮಾಡಿರುವ ಮೇರೆಗೆ ಪ್ರಸ್ತುತ ಹಾಲಿ ಇರುವ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳನ್ನು ಮೇಲ್ದರ್ಜೆಗೇರಿಸುವ ಕಾರ್ಯಕ್ರಮ ಮಾತ್ರವಿದ್ದು ಹೊಸ ಪ್ರಾಥಮಿಕ ಪಶುಚಿಕಿತ್ಸಾಕೇಂದ್ರಗಳನ್ನು ತೆರೆಯುವ ಕಾರ್ಯಕ್ರಮ ಇರುವುದಿಲ್ಲ.

ಪಶುಪರೀಕ್ಷಕರ ಸೇವೆಯಲ್ಲಿ (ಪ್ಯಾರಾ ವೆಟ್ಸ್) ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳನ್ನು ಪ್ರಾರಂಭಿಸುವ ಕಾರ್ಯಕ್ರಮವನ್ನು ಕೈಬಿಡಲಾಗಿದೆ. ಪ್ರತಿ ಪಶುಚಿಕಿತ್ಸಾಲಯದಲ್ಲಿ ಪಶುವೈದ್ಯರು ಇರುವುದು ಅವಶ್ಯಕವಿರುತ್ತದೆ.

ಡಾ: ಡಿ.ಎಂ. ನಂಜುಂಡಪ್ಪರವರ ವರದಿ ಆಧಾರದ ಮೇಲೆ ರಾಜ್ಯದ ಅತಿ ಹಿಂದುಳಿದ ತಾಲ್ಲೂಕುಗಳಲ್ಲಿ 69 ಪಶು ಚಿಕಿತ್ಸಾಲಯಗಳನ್ನಾಗಿ ಪ್ರಾರಂಭಿಸುವ ವಿಚಾರವು ಆರ್ಥಿಕ ಇಲಾಖೆಯ ಪರಿಶೀಲನೆಯಲ್ಲಿದೆ. ಆರ್ಥಿಕ ಇಲಾಖೆಯ ಸಹಮತಿ ದೊರೆತ ನಂತರ ಪ್ರಸ್ತುತ ಸಾಲಿನಲ್ಲಿಯೇ ಪಶುಚಿಕಿತ್ಸಾಲಯಗಳನ್ನು ಪ್ರಾರಂಭಿಸಲಾಗುವುದು. (ಡಾ: ಡಿ.ಎಂ. ನಂಜುಂಡಪ್ಪರವರ ವರದಿ ಆಧಾರದ ಮೇಲೆ ಪ್ರಸ್ತುತ ಸಾಲಿನಲ್ಲಿ ಪ್ರಾರಂಭಿಸಬಹುದಾದ 69 ಪಶುಚಿಕಿತ್ಸಾಲಯಗಳ ತಾತ್ಕಾಲಿಕ ಪಟ್ಟಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ).